ಬಂದಿರುತ್ತವೆ ಆ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುವಂಥದ್ದು ನಮ್ಮ ಜವಾಬ್ದಾರಿ. ಅನರ್ಹ ಫಲಾನುಭವಿಗಳು ಯಾದಿ ಏನಾದರೂ ತಯಾರಾಗಿದ್ದರೆ ಅದನ್ನು ರದ್ದುಮಾಡುವಂಥ ಕೆಲಸವನ್ನು ಮಾಡುತ್ತೇವೆ ಹೆಚ್ಚುವರಿ ಮನೆಗಳು ಬೇಕು ಎಂದು ಕೇಳಿದ್ದೀರಿ ಅದನ್ನು ಒದಗಿಸಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ ನವಗ್ರಾಮ ನಿರ್ಮಾಣ ಮಾಡುವಂಥದ್ದು ಏನಿದೆ ಕನಿಷ್ಟ 20 ಗುಂಪು ಮನೆಗಳು ಇರಬೇಕು 20 ಗುಂಪು ಮನೆಗಳು ಇದ್ದರಿದ್ದರೆ ಅದು ನವಗ್ರಾಮ ಆಗುವುದಿಲ್ಲ ಅದಕ್ಕೆ ಯಾರೂ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ ಆದ್ದರಿಂದ ಅಂತಹ ಪ್ರಕರಣಗಳು ಏನಾದರೂ ಇದ್ದಾರೆ ಕಾನೂನುಬಾಹಿರವಾದ ಪ್ರಕರಣಗಳು ಇದ್ದರೂ ಕೂಡ ನಾವು ಕ್ರಮವನ್ನು ಕೈಗೊಳ್ಳುತ್ತೇವೆ

ವಿಷಯ (ಥ) ಕಾಮು ಕ್ಷೇತ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಬೋರ್ಡ್‌ನವರು ಸರ್ಕಾರಿ ಜಾಗವನ್ನು ಅಳತೆ ಮಾಡುತ್ತಿರುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆ ಕಾಪು ಕ್ಷೇತ್ರದಲ್ಲಿ ಎಲ್ಲೂರು, ಮುದರುಗತಿ ಪರಿಸರದಲ್ಲಿ ಕಳೆದವಾರ ಅಲ್ಲಿ ಜನರ ವಿರೋಧ ಇದ್ದರೂ ಕೂಡ ಕೈಗಾರಿಕಾ ಡೆವಲಪ್‌ಮೆಂಟ್ ಬೋರ್ಡಿನವರು ಅಲ್ಲಿ ಜಾಗದ ಅಳತೆಯನ್ನು ಮಾಡಿದ್ದಾರೆ, ಖಾಸಗಿ ಮತ್ತು ಸರ್ಕಾರಿ ಎರಡು ಜಾಗಗಳನ್ನು ಅಳತೆ ಮಾಡಿದ್ದಾರೆ ಉಡುಪಿ ಜಿಲ್ಲಾಧಿಕಾರಿ ಮತ್ತು ತಾಲ್ಲೂಕು ತಹಸೀಲ್ದಾರ್‌ರವರ ಮೂಲಕ ವಿನಂತಿಯನ್ನು ಮಾಡಿದರೂ ಕೂಡ ಅಲ್ಲಿ ವಿರೋಧದ ನಡುವೆ ಅಳತೆಯನ್ನು ಮಾಡಿದ್ದಾರೆ ಅದರ ಬಳಿಕ ಜಿಲ್ಲಾಧಿಕಾರಿಗಳು ನಮಗೆ ಮಾಹಿತಿಯನ್ನು ನೀಡುವುವ ಬಗ್ಗೆ ಸಭೆ ಕರೆದಿದ್ದರು ಕಳೆದ ಶನಿವಾರ ಸಭೆಯನ್ನು ಕರೆದಾಗ ಜಿಲ್ಲಾಧಿಕಾರಿಗಳೇ ಆ ಸಭೆಯಲ್ಲಿ ಇಲ್ಲದೆ ಜನರ ವಿರೋಧದಿಂದ ಆ ಸಭೆ ಮುಂದೂಡಲ್ಪಟ್ಟಿದೆ ನಮ್ಮಲ್ಲಿ ಬರುವಂತಹ ಬೃಹತ್ ಕೈಗಾರಿಕೆಗಳಿಗೆ ಹಿಂದೆಯೂ ಕೂಡ ತುಂಬಾ ವಿರೋಧ ವಿತ್ತು, ಅಲ್ಲದೆ ಧರ್ಮಲ್ ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳು ಬರುತ್ತದೆಂದು ಜನರಲ್ಲಿ ಹೆದರಿಕೆ ಇದೆ ಹಾಗಾಗಿ ಅದರ ಬಗ್ಗೆ ಸರಿಯಾದಂತಹ ಮಾಹಿತಿಯೂ ಬೇಕಾಗಿದೆ ಜನರ ವಿರೋಧ ಇದ್ದಾಗ ಕೂಡ ಇಂತಹ ಕೈಗಾರಿಕೆಗಳು ಬರುವುದು ಸಮಂಜಸವಲ್ಲವೆಂದು ನಮ್ಮ ಜನತೆಯ ವಾದವಾಗಿದೆ ಅದರ ಬಗ್ಗೆ ಸರಿಯಾದಂತಹ ಮಾಹಿತಿಯನ್ನೂ ಕೊಡಬೇಕಾಗಿ ಸಂಬಂಧಪಟ್ಟ ಇಲಾಖೆಗೆ ಹಾಗೂ ಮಂತ್ರಿಗಳಿಗೆ ತಾವು ಸೂಚಿಸಬೇಕೆಂದು ಹಾಗೂ ಇದರ ಬಗ್ಗೆ ಇಲಾಖೆಯವರು ಮಾಹಿತಿ ನೀಡಬೇಕೆಂದು ನನ್ನ ವಿನಂತಿಯಗಿದೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮೊದಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಕೆಐಎಡಿಬಿಯವರು ಪ್ರಾರಂಭ ಮಾಡಿದ್ದರೆ ಅದರ ಬಗ್ಗೆ ಈಗಾಗಲೇ ಅದು ರಾಜ್ಯಪತ್ರದಲ್ಲಿ ಪ್ರಕಟಣೆಯಾಗಿರುತ್ತದೆ ಅದರ ಬಗ್ಗೆ ಎಲ್ಲರಿಗೂ ಮಾಹಿತಿ ಬಂತು ಎಂದು ಅದರ ಅರ್ಥ ಆದರೆ ಆ ವಿಚಾರದಲ್ಲಿ ವಿರೋಧಾಭಿಪ್ರಾಯಗಳು ಇದ್ದರೆ, ಯಾವ ಹಂತದಲ್ಲಿ ಆ ವಿರೋಧವನ್ನೂ ಪರಿಗಣಿಸಬೇಕು ಆ ವಿರೋಧದ ಹಂತ ಮೀರಿದ ನಂತರ ಅಧಿಕಾರಿಗಳಿಗೆ ಕೂಡ ಮತ್ತೆ ಅನೂರ್ಜಿತಗೊಳಿಸುವುದಕ್ಕಾಗಲಿ ಅಥವಾ ಅಧಿಕೃತವಾಗಿ ಘೋಷಿಸಿರುವಂತಹದ್ದನ್ನು ಕೈಬಿಡತಕ್ಕಂತಹ ಪ್ರಶ್ನೆಗೆ ಅದು ಮತ್ತೆ ಸರ್ಕಾರಕ್ಕೆ ಬರಬೇಕಾಗುತ್ತದೆ ಆ ಕಾರಣಕ್ಕಾಗಿ ಮಾನ್ಯ ಶಾಸಕರು ನಿರ್ದಿಷ್ಟ ಪ್ರಕರಣದ ಬಗ್ಗೆ ಬರೆದು ಕಳುಹಿಸಿದರೆ ಇದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳ ಗಮನಕ್ಕೆ ತಂದು ಆ ಅಧಿಕಾರಿಗಳ ಒಂದು ವರ್ತನೆಯಾಗಿರಬಹುದು, ಅಗತ್ಯತೆ ಅಥವಾ ಅನಗತ್ಯತೆ ಕುರಿತಾಗಿ ಸರ್ಕಾರ ಶೀಘ್ರವಾಗಿ ನಿರ್ಧಾರವನ್ನೂ ತೆಗೆದುಕೊ